

ಬನ್ನಿ, ನದಿ ವಿಹಾರಕ್ಕೆ ಎಂದು ಕರೆಯುವಂತಿದೆ ಯಮುನೆ. ದೆಹಲಿಯಲ್ಲಿ ಮಾಲಿನ್ಯದ ಪ್ರಮಾಣ ಕಡಿಮೆಯಾದಂತೆಲ್ಲ ಯಮುನಾ ನದಿಯ ಹೊಳಪೂ ಹೆಚ್ಚುತ್ತಿದೆ.

‘ಅರೆರೇ, ನಾನು ಇಲ್ಲಿಂದ ಹಿಮಾಲಯವನ್ನು ನೋಡುತ್ತಿದ್ದೇನೆಯೆ?’ ಎಂದು ಖುಷಿಯಾಗಿ ಮಾಸ್ಕ್ ತೆಗೆದು ಉದ್ಗಾರವನ್ನು ಎತ್ತಿದ. ನಿಜಕ್ಕೂ ಇದು ಸಂಭ್ರಮಿಸಬೇಕಾದ್ದೆ. ಏಕೆಂದರೆ ಜಲಂಧರ್‌ನಿಂದ 200 ಕಿಲೋ ಮೀಟರ್‌ಗೂ ಹೆಚ್ಚು ದೂರವಿರುವ ಹಿಮಾಲಯ ಕಾಣುವುದೆಂದರೆ?

ರಾಜಧಾನಿ ದೆಹಲಿ ಮೊನ್ನೆ ಮೊನ್ನೆಯವರೆಗೆ ಹೊಂಜು (ಹೊಗೆ+ಮಂಜು) ತುಂಬಿಕೊಂಡು ತತ್ತರಿಸಿಹೋಗಿತ್ತು. ನಗರವಾಸಿಗಳು ಹಿಡಿ ಶಾಪ ಹಾಕುತ್ತಿದ್ದರು. ಸರಿ–ಬೆಸ ಸಂಖ್ಯೆಯ ವಾಹನಗಳನ್ನು ಪರ್ಯಾಯ ದಿನಗಳಲ್ಲಿ ರಸ್ತೆಗಿಳಿಸುವ ವ್ಯವಸ್ಥೆಯೂ ದೊಡ್ಡ ಫಲವನ್ನೇನೂ ಕೊಡಲಿಲ್ಲ. ದಶಕದ ಹಿಂದೆಯೇ ಅಲ್ಲಿ ಡೀಸೆಲ್ ವಾಹನಗಳನ್ನು ನಿಷೇಧಿಸಿ, ಅದಾದರೂ ಪರಿಹಾರ ಕೊಡಬಹುದೆಂಬ ಪ್ರಯೋಗವೂ ಸಂಪೂರ್ಣವಾಗಿ ಫಲಕೊಡಲಿಲ್ಲ. ಪಂಜಾಬಿನಲ್ಲಿ ವ್ಯವಸಾಯ ಮುಗಿದಾಗ, ಕೂಳೆಯನ್ನು ಸುಟ್ಟು ಅದರ ಕಾರ್ಬನ್ ಕಣಗಳು ದೆಹಲಿಯನ್ನು ಮುತ್ತಿದಾಗ ಸರ್ವೋಚ್ಚ ನ್ಯಾಯಾಲಯವೇ ಅಸಮಾಧಾನ ವ್ಯಕ್ತಪಡಿಸಿ ‘ನೀವು ಜನಗಳನ್ನು ಹೀಗೆ ಕೊಲ್ಲುತ್ತಿದ್ದೀರಾ?’ ಎಂದು ಎಚ್ಚರಿಸಿತ್ತು. ದೆಹಲಿ ವಸ್ತುಶಃ ನರಕವಾಗಿತ್ತು. ಇದಕ್ಕೆಲ್ಲ ಬ್ರೇಕ್ ಹಾಕಿದ್ದು ಕೊರೊನಾ ವೈರಸ್ – ‘ಸಾಲಾ, ಏಕ್ ವೈರಸ್!’ ಈಗ ದೆಹಲಿಯ ವಾಯುಗೋಳದಲ್ಲಿ ಶೇ. 50 ಭಾಗ ಮಾಲಿನ್ಯ ಕಡಿಮೆಯಾಗಿದೆ. ಅಷ್ಟರಮಟ್ಟಿಗೆ ದೆಹಲಿ ನಿವಾಸಿಗಳಿಗೆ ಖುಷಿಯಾಗಿರಬಹುದು. ಸಾವು ಎದುರಾದಾಗಲೂ ಮತ್ತೆ ಯಾವುದೋ ಸಂಗತಿ ಸಾಂತ್ವನ ತರುತ್ತದೆ. ದೆಹಲಿಯೊಂದೇ ಅಲ್ಲ, ಭಾರತದಲ್ಲಿ ಈ ಗಳಿಗೆಯಲ್ಲಿ 103 ನಗರಗಳು ಮಾಲಿನ್ಯದ ಹೊದಿಕೆಯನ್ನು ಅತ್ತ ಸರಿಸಿ ನಗುತ್ತಿವೆ. ಇಂಥ ಸುದ್ದಿ ನಮ್ಮ ಬದುಕಿನಲ್ಲಿ ಎಂದಾದರೂ ಸಿಕ್ಕೀತೆ?

ಇತ್ತ ಬೆಂಗಳೂರಿನ ಮಲ್ಲೇಶ್ವರದಲ್ಲಿ ಕೆಲವು ಮನೆಗಳ ಮೇಲೆ ನವಿಲು ಕಾಣಿಸಿಕೊಂಡವು. ಬೀದಿಯಲ್ಲಿ ರಾಜಾರೋಷ ಓಡಾಟ. ನಗರ ಹೇಗಿದೆ ಎಂದು ಇನ್‌ಸ್ಪೆಕ್ಷನ್ ಮಾಡುವ ಸರತಿ ಅವುಗಳಿಗೆ. ನಗರವಾಸಿಗಳು ಕ್ವಾರಂಟೈನ್‌ನಲ್ಲಿರುವಾಗ ಜನ–ವಾಹನ ಹೊರಗೆ ಬರುವುದಿಲ್ಲ ಎಂದು ಅವು ಹೇಗೆ ಲೆಕ್ಕಹಾಕಿದವೋ ತಿಳಿಯದು. ಸುತ್ತಲಿನ ನಿಶ್ಯಬ್ದ ಅವುಗಳಿಗೆ ಸ್ಫೂರ್ತಿ, ಧೈರ್ಯ ಕೊಟ್ಟಿರಬೇಕು. ಇನ್ನು ತಿರುಪತಿ ತಿಮ್ಮಪ್ಪನ ಸದ್ಯದ ಏಕಾಂತ ಎಲ್ಲ ಭಕ್ತರಿಗೂ ಗೊತ್ತು. ಒಬ್ಬ ಕುತೂಹಲಿ ತಿರುಪತಿ ಬೆಟ್ಟದ ತಿರುವುಗಳಲ್ಲೇ ನಿಂತು ಕಂಡದ್ದು ತಂಡತಂಡಗಳಲ್ಲಿ ಆರಾಮವಾಗಿ ರಸ್ತೆಗಳಲ್ಲಿ ಇಳಿದಿದ್ದ ಜಿಂಕೆಗಳನ್ನು. ಇದು ಸಾಧ್ಯವೆ? ಪ್ರತಿವರ್ಷ ವಾಯುಮಾಲಿನ್ಯ ಸಂಬಂಧಿತ ರೋಗದಿಂದ ಚೀನಾದಲ್ಲಿ ಹತ್ತು ಲಕ್ಷ ಮಂದಿ ಸಾಯುತ್ತಾರೆಂಬುದು ಡ್ಯೂಕ್ ವಿಶ್ವವಿದ್ಯಾಲಯದ ಪರಿಸರ ತಜ್ಞ ಜಿಮ್ ಸ್ಯಾಂಗ್ ಕೊಟ್ಟಿರುವ ಅಂಕೆ ಅಂಶ. ‘ಚೀನಾದ ಮೇಲೆ ಕೊರೊನಾ ವೈರಸ್‌ನ ಆಕ್ರಮಣ ದೊಡ್ಡದೇನಲ್ಲ ಬಿಡಿ, ಈಗ ಆ ದೇಶದ ವಾಯುಗೋಳ ದೊಡ್ಡ ಪ್ರಮಾಣದಲ್ಲಿ ಮಾಲಿನ್ಯದಿಂದ ಮುಕ್ತವಾಗಿದೆ. ಕೊರೊನಾ ವೈರಸ್‌ನಿಂದ ಸುಮಾರು 3,200 ಮಂದಿ

ಕಾನೂನಿನ ಕಣ್ಣಿಗೆ ಮಣ್ಣೆರಚಿ ನಡೆಯುತ್ತಿರುವ ಚಟುವಟಿಕೆಗಳಿಂದಾಗಿ ವಿಶ್ವದ ಶ್ವಾಸಕೋಶ ಎಂದು ಹೆಸರಾದ ಅಮೆಜಾನ್ ಕೊಳ್ಳದ ಕಾಡು ಕೂಡ ವರ್ಷದಿಂದ ವರ್ಷಕ್ಕೆ ಸವಕಳಿಯಾಗುತ್ತಿದೆ.

